## ಕೆನೆ ಪದರ ಮೀಸಲು ರದ್ದು ಸಲ್ಲ

**ಹೊಸದಿಲ್ಲಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೆನೆ ಪದರ ಮೀಸಲು ಗುರ್ತು ಅಸಾಧ್ಯವೆಂದಿರುವ ಕೇಂದ್ರ ಸರಕಾರ, ಈ ಸಂಬಂಧ ತೀರ್ಪು ಮರುಪರಿಶೀಲನೆ ಕೋರಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಪ್ರಕರಣವು ಸಪ್ತ ಸದಸ್ಯರ ವಿಸ್ತೃತ ಪೀಠಕ್ಕೆ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆ. ಶಾಲಾ-ಕಾಲೇಜು ಪ್ರವೇಶ ಮತ್ತು ಉದ್ಯೋಗದಲ್ಲಿ ಕೆನೆ ಪದರ ಮೀಸಲು ಜಾರಿಗೊಳಿಸಬೇಕೆಂದು ಕೋರಿ 2018ರಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಪಂಚ ಸದಸ್ಯರ ಸುಪ್ರೀಂ ಕೋರ್ಟ್ ಸಂವಿಧಾನ ಪೀಠ ತಳ್ಳಿಹಾಕಿತ್ತು. ಮೀಸಲಾತಿಯೊಳಗೆ ತಾರತಮ್ಯ ಮಾಡಲು ಸಾಧ್ಯವೇ ಇಲ್ಲವೆಂದಿತ್ತು.



## ಕೆನೆ ಪದರ ಮೀಸಲು ನಿರಾಕರಣೆ: ಕೇಂದ್ರದ ಮೇಲ್ಮನವಿ

**ಹೊಸದಿಲ್ಲಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೆನೆ ಪದರ ಮೀಸಲು ನಿರಾಕರಣೆ ತೀರ್ಪಿನ ಮರು ಪರಿಶೀಲನೆ ಕೋರಿ ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದು, ಪ್ರಕರಣವು ಏಳು ಸದಸ್ಯರ ವಿಸ್ತೃತ ಪೀಠಕ್ಕೆ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆ.



ಶಾಲಾ-ಕಾಲೇಜು ಪ್ರವೇಶ ಮತ್ತು ಉದ್ಯೋಗದಲ್ಲಿ ಕೆನೆ ಪದರ ಮೀಸಲು ಜಾರಿಗೊಳಿಸಬೇಕೆಂದು ಕೋರಿ 2018ರಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಐವರು ಸದಸ್ಯರ ಸುಪ್ರೀಂ ಕೋರ್ಟ್ ಸಂವಿಧಾನ ಪೀಠ ಸ್ಪಷ್ಟವಾಗಿ ತಳ್ಳಿಹಾಕಿತ್ತು. ಮೀಸಲಾತಿಯೊಳಗೆ ತಾರತಮ್ಯ ಮಾಡಲು ಸಾಧ್ಯವೇ ಇಲ್ಲ ಎಂದು ತೀರ್ಪು ನೀಡಿತ್ತು. ಕೆನೆ ಪದರ ನಿರಾಕರಣೆ ತೀರ್ಪಿನ ವಿರುದ್ಧ ಹಲವಾರು ಅರ್ಜಿಗಳು ಸಲ್ಲಿಕೆಯಾಗಿದ್ದು, ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬ್ಡೆ ನೇತೃತ್ವದ ಪೀಠ ಅವುಗಳ ವಿಚಾರಣೆ ನಡೆಸುತ್ತಿದೆ. ಮರು ಪರಿಶೀಲನೆ ಅರ್ಜಿಯ ಔಚಿತ್ಯವನ್ನು ಸಮ್ಮತಿಸಿರುವ ನ್ಯಾಯಪೀಠ, ಏಳು ಸದಸ್ಯರ ವಿಸ್ತೃತ ಪೀಠಕ್ಕೆ ಪ್ರಕರಣ ವರ್ಗಾಯಿಸುವ ಬಗ್ಗೆ ಚಿಂತನೆ ನಡೆಸಿದೆ. ಈ ಕುರಿತು ಎರಡು ವಾರಗಳ ಬಳಿಕ ಖಚಿತ ತೀರ್ಮಾನ ಪ್ರಕಟಿಸುವುದಾಗಿ ನ್ಯಾ.ಬೊಬ್ಡೆ ತಿಳಿಸಿದರು.

ಸಮತಾ ಆಂದೋಲನ ಸಮಿತಿ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಒ.ಪಿ.ಶುಕ್ಲಾ ಅವರಿಂದ ಮತ್ತೆರಡು ಹೊಸ ಅರ್ಜಿಗಳು ಸಲ್ಲಿಕೆಯಾಗಿವೆ. ಈ ಅರ್ಜಿಗಳೂ ವಿಸ್ತೃತ ಪೀಠಕ್ಕೆ ವರ್ಗಾವಣೆಗೊಳ್ಳುವ ಸಾಧ್ಯತೆ ಇದೆ. "ಕೆನೆ ಪದರ ಮೀಸಲು ಗುರುತಿಸುವುದಾದರೆ ಅದಕ್ಕೆ ನಿರ್ದಿಷ್ಟ ಮಾನದಂಡಗಳನ್ನು ಅನುಸರಿಸಬೇಕು. ಅವು ಯಾವು ಎನ್ನುವುದನ್ನು ಖಚಿತಪಡಿಸುವ ಅಗತ್ಯ ಇದೆ," ಎಂದು ಅರ್ಜಿದಾರರೊಬ್ಬರು ವಾದಿಸಿದ್ದಾರೆ.